ಲಾಗುವುದೆಂದು ಮಾನ್ಯ ಲೋಕೋಪಯೋಗಿ ನೀರಾವರಿ ಸಚಿವರು ಸ್ಥಳದಲ್ಲೂ, ಸದನದಲ್ಲೂ ಆಶ್ವಾಸನೆ ಇತ್ತಿದ್ದರು. ಇದನ್ನು ನಂಬಿದ ಜನ ಅತ್ಯಂತ ಹರ್ಷ ಪಟ್ಟಿದ್ದರು. ಆದರೆ ಕಾರ್ಯಾರಂಭ ಆಗುವ ಯಾವುದೇ ಸೂಚನೆ ಈಗ ಕಾಣುತ್ತಿಲ್ಲ, ರಸ್ತೆ ಕೆಲಸ ಮಾತ್ರ ಆಗುತ್ತಿದೆ. ಅದೂ ಗ್ರಾಮಸ್ಥರು, ಮಂಡಲ ಪಂಚಾಯತಿಯವರು, ಜಿಲ್ಲಾಪರಿಷತ್‌ನವರು, ಶಾಸಕರು ಸೂಚಿಸಿದ ಕಡೆ ಆಗದೆ ಕಾಡಿನ ಮಧ್ಯೆ ಆಗುತ್ತಿದೆ. ಯೋಜನೆಯ ಶೀಘ್ರ ಕಾರ್ಯಾರಂಭವಾಗಬೇಕು, ರಸ್ತೆ ನಿಯೋಜಿತ ಸೇತುವೆ, ಜನ ಸಂಚಾರ ಅಧಿಕ ಇರುವ ಭಾಗದಲ್ಲಿ ಆಗಬೇಕು. ಆತನಕ ಮಂಜೂರಾದ ರಸ್ತೆ ಕಾಮಗಾರಿ ತಡೆಹಿಡಿಯಬೇಕು ಎಂದು ಒತ್ತಾಯಿಸುತ್ತೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಶ್ರೀ ಎಂ. ರಘುಪತಿ.—ಮಾನ್ಯ ಪಿ. ಡಬ್ಲ್ಯೂ. ಡಿ. ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದು ಉತ್ತರ ಕೊಡಿಸುವುದಕ್ಕೆ ಹೇಳುತ್ತೇನೆ.

(೨೨) ಬಾಗೇಪಲ್ಲಿ ತಾಲ್ಲೂಕಿನ ಗಡಿಮಾ ಕೆರೆಯಂಗಳದಲ್ಲಿ ಸಾಗುವಳಿ ಮಾಡುತ್ತಿರುವವರನ್ನು ಬಿಡಿಸುವುದು

ಶ್ರೀ ಬಿ. ನಾರಾಯಣಸ್ವಾಮಿ.—ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನ ಗಡಿದಮಾ ಕೆರೆಯಂಗಳದಲ್ಲಿ ಜಮೀನನ್ನು ರೈತರಿಗೆ ಬಾಗೇಪಲ್ಲಿ ತಾಲ್ಲೂಕು ರೆವಿನ್ಯು ಅಧಿಕಾರಿಗಳು ಮಂಜೂರು ಮಾಡಿದ್ದು ರೈತರು ಸದರಿ ಜಮೀನಿನಲ್ಲಿ ಬೋರ್‌ವೆಲ್ ಹಾಕಿರುತ್ತಾರೆ. ಹಾಗೂ ವಿದ್ಯುಚ್ಛಕ್ತಿ ಇಲಾಖೆಯವರು ವಿದ್ಯುತ್ ಕೂಡ ಒದಗಿಸಿದ್ದಾರೆ. ಕೆರೆಗೆ ನೀರು ಬಂದ ಸಮಯದಲ್ಲಿ ಸದರಿ ಜಮೀನಿನ ರೈತರು ತೂಬನ್ನು ಎತ್ತಿ ಕೆರೆಯಿಂದ ನೀರು ಹೋಗುವಂತೆ ಮಾಡುತ್ತಾರೆ. ಕಾರಣ ನೀರು ತುಂಬಿಕೊಂಡಲ್ಲಿ ಮೇಲ್ಕಂಡ ಜಮೀನು ಮುಳುಗಡೆಯಾಗುತ್ತದೆ. ಇದರಿಂದಾಗಿ ಕೆರೆಯ ಕೆಳಗಿನ ನೂರಾರು ರೈತರಿಗೆ ಬಹಳ ತೊಂದರೆ ಯಾಗುತ್ತಿದ್ದು ಅವರು ಫಸಲು ತೆಗೆಯಲು ಆಗುತ್ತಿಲ್ಲ. ಈ ಒಂದು ಪ್ರಕರಣ ನನ್ನ ಗಮನಕ್ಕೆ ಬಂದಿದ್ದು, ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಇನ್ನೂ ಇರಬಹುದೆಂದು ಕಂಡು ಬರುತ್ತದೆ. ಆದ್ದರಿಂದ ಸರಕಾರದವರು ಕೂಡಲೇ ತನಿಖೆ ನಡೆಸಿ ಜಿಲ್ಲೆಯ ಯಾವ ಕೆರೆಯನ್ನಾಗಲೀ ಈ ರೀತಿ ಮಂಜೂರು ಮಾಡಿದಲ್ಲಿ ಅವುಗಳನ್ನು ಹಾಗೂ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ರೈತರುಗಳ ಜಮೀನು ಬಿಡಿಸಿ ಕೆರೆಯಂಕಿಗಡಿ ಫಸಲು ಮಾಡುತ್ತಿರುವ ರೈತರಿಗೆ ಅನುಕೂಲ ಮಾಡಬೇಕೆಂದು ಹಾಗೂ ಈ ರೀತಿ ಸರಕಾರೀ ಯಂತ್ರವನ್ನು ದುರುಪಯೋಗ ಪಡಿಸಿಕೊಂಡ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಹೇಳಿ ಇದಕ್ಕೆ ಉತ್ತರ ತರಿಸಿ ಕೊಡುತ್ತೇನೆ.

ಅಲ್ಪಕಾಲಾವಧಿ ಚರ್ಚೆ (ಮುಂದುವರೆದ ಚರ್ಚೆ)

ಎಂ.ಸಿ.ಎಫ್ ಹಾಗೂ ಹತ್ತಿಗಿರಣಿ ಇತರ ಕೈಗಾರಿಕೆಯಲ್ಲಿ ತಲೆದೋರಿರುವ ಮುಗ್ಗಟ್ಟಿನ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾನು ಕೈಗಾರಿಕೆಗಳಲ್ಲಿನ ಮುಗ್ಗಟ್ಟು ವಿಚಾರದಲ್ಲಿ ಮತ್ತು ಅದರಲ್ಲಿಯೂ ಟೆಕ್ಸ್‌ಟೈಲ್ ಮತ್ತು ಇಂಜಿನಿಯರಿಂಗ್ ಕೈಗಾರಿಕೆಗಳ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೆ. ಅದನ್ನು ನಾನು ಮತ್ತೆ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ ಇವತ್ತು ಮುಗ್ಗಟ್ಟು ಟೆಕ್ಸ್‌ಟೈಲ್ ಕೈಗಾರಿಕೆಗಳಿಗೆ ಮಾತ್ರವಲ್ಲ ಎಲ್ಲಾ ಕೈಗಾರಿಕೆಗಳಲ್ಲಿಯೂ ಸಾರ್ವತ್ರಿಕವಾಗಿದೆ. ಇಂಜಿನಿಯರಿಂಗ್ ಕೈಗಾರಿಕೆ ಇರಬಹುದು, ಲೆದರ್ ಕೈಗಾರಿಕೆ ಇರಬಹುದು ಷುಗರ್ ಕೈಗಾರಿಕೆ ಇರಬಹುದು, ಎಲ್ಲಾ ಕಡೆಯೂ ಇದೆ. ಶೇಕಡ ೩೦ ರಷ್ಟು ಕೈಗಾರಿಕೆಗಳಲ್ಲಿ ಮುಗ್ಗಟ್ಟು ಇದೆಯೆಂದು ಮಾನ್ಯ ಜೀವಿಜಯರು ಒಂದು ಕಡೆ ಹೇಳಿದ್ದಾರೆ. ಮುಗ್ಗಟ್ಟಿನಲ್ಲವೇ ಇಲ್ಲವೇ ಮುಚ್ಚುವಂಥ ಪರಿಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ. ಮತ್ತೆ ಅದನ್ನು ನಿರಾಕರಿಸುವ ರೀತಿಯಲ್ಲಿ ಯಾರೂ ಹೇಳಿಕೆ ಕೊಟ್ಟಿಲ್ಲ ಸುಮಾರು ೬,೦೦೦ ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿವೆ ಎಂದು ಸುಮಾರು ೬ ತಿಂಗಳ ಹಿಂದೆ ಹೇಳಿದ್ದರು. ಇವತ್ತು ಇನ್ನೂ ಜಾಸ್ತಿಯಾಗಿರಬಹುದು. ಇವತ್ತು ಟೆಕ್ಸ್‌ಟೈಲ್ ಕೈಗಾರಿಕೆ ತೆಗೆದು